ಪ್ರಯತ್ನ ಮಾಡಬೇಕು. ಇದ್ದುದರಲ್ಲಿ 18 ಪರ್ಸೆಂಟ್ ಕೊಡುವುದಿಲ್ಲ, ನಾನು ಹೇಳುವುದು. ಹಿಂದೆ ಏನು 16000 ಮತ್ತು 7000 ಕೊಟ್ಟಿದ್ದೀರಿ, ಅದರಲ್ಲಿ ಕೊಟ್ಟಿಲ್ಲ. 16 ರಿಂದ 20 ಜನರಿಗೋ ಬೆರಳೆಣಿಕೆಯಷ್ಟು ಕೊಟ್ಟಿದ್ದೀರಿ. ಅದಕ್ಕಾಗಿ ನಾನು ಏನು ವಿನಂತಿ ಮಾಡುತ್ತೇನೆಂದರೆ ಈಗ ಇರತಕ್ಕದ್ದನ್ನು ಅವರಿಗೇ ರಿಸರ್ವೇಷನ್ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ವ್ಯಾಪಾರ ಮಳಿಗೆ ಅಥವಾ ನಿವೇಶನಗಳು ಖಾಲಿ ಏನು ಇವೆ, ಅಲ್ಲಿ ಎಸ್‌ಸಿ:ಎಸ್‌ಟಿ ಜನಾಂಗದವರು ಮುಂದೆ ಬಂದರೆ, ಅವರು ಅರ್ಜಿಯನ್ನು ಹಾಕಿದರೆ ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ನಮ್ಮ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆಯೇ ನಾವು ಈ ಕಾನೂನನ್ನು ಜಾರಿಗೆ ತಂದಿದ್ದೇವೆ. ಇದು ಮೊದಲು ಇರಲಿಲ್ಲ, ಇದಕ್ಕಾಗಿ ಯಾರೂ ಮುಂದೆ ಬಂದಿರಲಿಲ್ಲ. ಆದರೆ ನಾವೇ ಇವರಿಗೆ ಅನ್ಯಾಯವಾಗಬಾರದು ಎಂಬ ವಿಚಾರವನ್ನಿಟ್ಟುಕೊಂಡು ಇದನ್ನು ನಾವು ಮಾಡಿದ್ದೇವೆ. ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ ಅದನ್ನು ಪರಿಶೀಲನೆ ಮಾಡಿ ಅವರಿಗೆ ನ್ಯಾಯ ಒದಗಿಸಿಕೊಡುವ ಬಗ್ಗೆ ಪ್ರಾಮಾಣಿಕವಾದ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ಅವರು ಮುಂದೆ ಬರುವುದಕ್ಕೆ ನೀವು ಸೂಚನೆಯನ್ನು ಪತ್ರಿಕೆಗಳ ಮೂಲಕ ಕೊಡಬೇಕು. ಮುಂದೆ ಬನ್ನಿ ಎಂದರೆ ಅವರು ಹೇಗೆ ಬರುವುದಕ್ಕೆ ಸಾಧ್ಯ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಪತ್ರಿಕೆಗಳ ಮುಖಾಂತರವೇ ಯಶವಂತಪುರ ವ್ಯಾಪಾರ ಮಳಿಗೆಗಳನ್ನು ಕೊಡುವುದರ ಬಗ್ಗೆ ಅದರಲ್ಲಿ ಹಾಕಿ ಕೊಟ್ಟಿದ್ದೇವೆ, ತಾವು ದಯವಿಟ್ಟು ತಾವು ನೋಡಿರಲಿಕ್ಕಿಲ್ಲ. ತಮಗೆ ಬೇಕಾದರೆ ನಾನು ಕಾಪಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ : ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಅದರದ್ದು ಏನೂ ಪ್ರಶ್ನೆ ಇಲ್ಲ, ಏಕೆಂದರೆ ತಾವು ಅಧಿಕಾರಕ್ಕೆ ಬಂದ ಮೇಲೆ ಇದನ್ನು ಮಾಡಿದ್ದೀರಿ, ಅದಕ್ಕಾಗಿ ನಾವು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.

ಶ್ರೀ ರಾಜೇಂದ್ರ ವರ್ಮ : ಮಾನ್ಯ ಅಧ್ಯಕ್ಷರೆ, ಹಿಂದೆ ನೀವು ಏನು 18 ಪರ್ಸೆಂಟ್ ಕೊಟ್ಟಿಲ್ಲ, ಈಗ ಉಳಿದಿರುವುದರಲ್ಲಿ ಹಿಂದೆ ಕೊಡದಿರುವ ಬಗ್ಗೆ ಭರ್ತಿ ಮಾಡಿ ಎನ್ನುವ ಉದ್ದೇಶ ನಮ್ಮದು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಎಲ್ಲೆಲ್ಲಿ ಖಾಲಿ ಇವೆ, ಅವರುಗಳು ಅರ್ಜಿ ಹಾಕಿದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಮಂಡ್ಯ ನಗರದಲ್ಲಿ ರೈತ ಸಂತೆ ಪ್ರಾರಂಭಿಸುವುದು

615(6331) : ಶ್ರೀ ಎಂ. ಶ್ರೀನಿವಾಸ್ (ಮಂಡ್ಯ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತಸಂತೆ ಪ್ರಾರಂಭಿಸಲು ಸರ್ಕಾರ ತೀರ್ಮಾನಿಸಿದೆಯೇ?

ಆ) ಇದ್ದಲ್ಲಿ, ಮಂಡ್ಯ ಕ್ಷೇತ್ರದ ಮಂಡ್ಯದಲ್ಲಿ ರೈತ ಸಂತೆ ಯಾವಾಗ ಪ್ರಾರಂಭಿಸಲಾಗುವುದು?

ಇ) ಹಾಗಿದ್ದಲ್ಲಿ, ಸಂತೆಯ ಕಾಮಗಾರಿಗಳ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ?

ಈ) ಇದ್ದಲ್ಲಿ, ಅಂದಾಜು ವೆಚ್ಚ ಎಷ್ಟು?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಹೌದು.

ಆ) ಮಂಡ್ಯ ನಗರಸಭೆಯ ವಶದಲ್ಲಿರುವ ಸಂತೇಮಾಳದ 64,685 ಚದರಡಿ ಜಾಗವನ್ನು (1 ಎಕರೆ 20 ಗುಂಟೆ) ಸಮಿತಿಯ ವಶಕ್ಕೆ ಪಡೆಯಲು ಕ್ರಮ ಜರುಗಿಸಲಾಗುತ್ತದೆ. ಸದರಿ ಜಾಗವನ್ನು ಪಡೆದ ನಂತರ ರೈತರ ಸಂತೆ ಸ್ಥಾಪಿಸಲು ಅವಶ್ಯ ಕ್ರಮ ಜರುಗಿಸಲಾಗುವುದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಂಡ್ಯ ನಗರಸಭೆಯ ವಶದಲ್ಲಿರುವ ಸಂತೇಮಾಳದ ಭಾಗವನ್ನು ಪಡೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಮಂಡ್ಯ ನಗರಸಭೆಯಲ್ಲಿ ಈಗಾಗಲೇ ಇದರ ಬಗ್ಗೆ ತೀರ್ಮಾನವಾಗಿ ಈ ಸಂತೇಮಾಳವನ್ನು ಮಾರುಕಟ್ಟೆ ಸಮಿತಿಗೆ ವಹಿಸಬೇಕೆಂದು ತೀರ್ಮಾನವಾಗಿದೆ. ಆದರೆ ಇದುವರೆವಿಗೂ ಅವರು ಕಾರ್ಯನಿರತವಾಗಿರುವುದಿಲ್ಲ. ಅವರು ಆ ಜಾಗವನ್ನು ಪಡೆದುಕೊಂಡು ಯಾವಾಗ ಈ ರೈತ ಸಂತೆಯನ್ನು ಪ್ರಾರಂಭಿಸುತ್ತಾರೆ ಎನ್ನುವ ಬಗ್ಗೆ ನಮಗೆ ಮಾಹಿತಿ ಬೇಕು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಈ ಸಂತೇಮಾಳದ ಸುಮಾರು 1 ಎಕರೆ 20 ಗುಂಟೆ ಜಮೀನನ್ನು ನಮಗೆ ತುರ್ತಾಗಿ ಮಂಡ್ಯ ನಗರಸಭೆಯವರು ಕೊಟ್ಟರೆ ಮಾಡಿಕೊಡುತ್ತೇವೆ, ಅವರು ಇದುವರೆವಿಗೂ ಕೊಟ್ಟಿರುವುದಿಲ್ಲ. ಈಗಾಗಲೇ ಅವರಿಗೆ ಪತ್ರವನ್ನು ಕೂಡ ಬರೆದಿದ್ದೇವೆ. ನೀವು ತಕ್ಷಣ ಅದನ್ನು ನಮ್ಮ ವಶಕ್ಕೆ ಕೊಟ್ಟರೆ ಅಲ್ಲಿ ಒಳ್ಳೆಯ ಆದಾಯ ಬರುತ್ತಿದೆ. ನಾನು ಶಾಸಕರಲ್ಲಿ ವಿನಂತಿಯನ್ನು ಮಾಡುತ್ತೇನೆ. ದಯವಿಟ್ಟು ಆ ಜಮೀನನ್ನು ನಮ್ಮ ಎಪಿಎಂಸಿಗೆ ಕೊಡುವಂತಹ ವ್ಯವಸ್ಥೆ ಮಾಡಿದರೆ ಅದಕ್ಕಾಗಿ ನಮಗೆ ಹಣದ ಕೊರತೆ ಏನೂ ಇಲ್ಲ. ತಕ್ಷಣ ಅದಕ್ಕೆ ಎಸ್ಟಿಮೇಟ್ ಮಾಡಿ, ಪ್ಲಾನ್ ಮಾಡಿ, ಹಣವನ್ನು ಕೊಡುವಂತಹ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ಶ್ರೀ ಎಂ. ಶ್ರೀನಿವಾಸ : ನಗರಸಭೆಯು ಇದರ ಬಗ್ಗೆ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡು ನಾವು ಕೊಡುವುದಕ್ಕೆ ರೆಡಿಯಾಗಿದ್ದೇವೆ, ಎಂದು ಹೇಳಿದರೂ ಕೃಷಿ ಉತ್ಪನ್ನ ಮಾರುಕಟ್ಟೆಯವರೇ ತಯಾರಾಗಿ ಅದನ್ನು ಪಡೆದುಕೊಂಡಿಲ್ಲ, ಅದಕ್ಕೆ ಏನು ಕಾರಣವೆಂದು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ನಾವು 18-4-2005ರಲ್ಲಿ ನಮ್ಮ ವಶಕ್ಕೆ ಕೊಡಿ ಎಂದು ಮಂಡ್ಯ ನಗರಸಭೆಗೆ ಒಂದು ಪತ್ರವನ್ನು ಬರೆದಿದ್ದೇವೆ. ಅಲ್ಲಿ ನಾವು 3 ಜಾಗಗಳನ್ನು ನೋಡಿದ್ದೇವೆ. ಅವುಗಳಲ್ಲಿ ಈ ಜಾಗವು ಒಳ್ಳೆಯದು ಇದೆ. ಇದು ಸಂತೆ ಮಾಡುವುದಕ್ಕೆ ಯೋಗ್ಯವಾದ ಸ್ಥಳ ಎಂದು ಹೇಳಿದ್ದಾರೆ. ದಯವಿಟ್ಟು ತಾವು ಅದನ್ನು ನಮ್ಮ ವಶಕ್ಕೆ ಕೊಟ್ಟರೆ ನಾವು ತಕ್ಷಣ ಮಾಡಿಕೊಡುತ್ತೇವೆ.

ಶ್ರೀ ಎಂ. ಶ್ರೀನಿವಾಸ : ಇದೇ ಜಾಗವನ್ನು ವಶಕ್ಕೆ ಕೊಡುವುದರ ಬಗ್ಗೆ ನಗರಸಭೆ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದೆ. ಅದರ ಬಗ್ಗೆ ತಮ್ಮ ಇಲಾಖೆಗೆ ಪತ್ರವನ್ನೂ ಸಹ ಬರೆದಿದ್ದೇವೆ. ಆದರೂ ಇದನ್ನು ಪಡೆಯುವುದಕ್ಕೆ ಕಾರ್ಯವನ್ನು ಪ್ರಾರಂಭಿಸಿಲ್ಲ. ಅದಕ್ಕೆ ಕಾರಣವೇನು?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ನಮ್ಮ ವಶಕ್ಕೆ ಬಂದರೆ ನಾವು ಮಾಡುತ್ತೇವೆಂದು ಹೇಳಿದ್ದೇವೆ.